ಮೇಲೆ 'ಅಧ್ಯಕ್ಷ' ಚೆನ್ನಾಗಿ ಹೋಯ್ತು. ಅದಾದ ಮೇಲೆ ಫುಲ್ ಬಿಜಿ ಆದೆ. ಕಮರ್ಷಿಯಲ್ ಆಗಿ ಬಿಜಿ ಆಗಿದ್ದು, 'ಬಾಂಬೆ ಮಿಠಾಯಿ' ಅಂತ ಸಿನಿಮಾ ಬಂತಲ್ಲ... ಅದು ಸ್ವಲ್ಪ ಕಮರ್ಷಿಯಲೀನೂ ವರ್ಕ್ ಆಯ್ತು''.

ಉಪೇಂದ್ರ ಅವರನ್ನು ಹೊರತುಪಡಿಸಿದರೆ ಕನ್ನಡದ ಬಹುತೇಕ ಪ್ರಮುಖ ನಾಯಕರ ಜೊತೆ ಚಿಕ್ಕಣ್ಣ ಅಭಿನಯಿಸಿದ್ದಾರೆ. ಆದರೆ, ಜನ ಹೆಚ್ಚು ಮೆಚ್ಚಿಕೊಂಡಿರುವುದು ಯಶ್ ಮತ್ತು ಶರಣ್ ಜೊತೆಯಲ್ಲಿ.

ಕನ್ನಡಕ್ಕೆ ಕಂಪೇರ್ ಮಾಡಿದರೆ ನೆರೆಭಾಷೆಯ ಚಿತ್ರಗಳಲ್ಲಿ ಕಾಮಿಡಿ ಹೇಗಿರುತ್ತದೆ ಎನ್ನುವ ಪ್ರಶ್ನೆಯನ್ನು ಚಿಕ್ಕಣ್ಣ ತಮ್ಮ ನಗುವಿನಲ್ಲೇ ತಳ್ಳಿಹಾಕಿದರು.

''ನನಗೆ ಕನ್ನಡ ಬಿಟ್ಟು ಬೇರೆ ಭಾಷೆ ಬರೊಲ್ಲ. ರೀಮೇಕ್ ಸಿನಿಮಾ ಮಾಡುವಾಗಲೂ ಆ ಭಾಷೆಯ ಸಿನಿಮಾ ನೋಡೊಲ್ಲ. ನೆರೆಯ ಭಾಷೆಯ ಕೆಲವು ಹಿರಿಯ ನಟರು ಬಿಟ್ಟರೆ ಬೇರೆ ಯಾರೂ ಗೊತ್ತಿಲ್ಲ. ಇಂಗ್ಲಿಷ್ ಸಿನಿಮಾ ಒಂದಷ್ಟು ನೋಡುತ್ತೇನೆ. 'ಲೈಫ್ ಆಫ್ ಪೈ' ರೀತಿಯ ಸಿನಿಮಾಗಳು ನಂಗಿಷ್ಟ. ಇನ್ನು ನಮ್ಮ ಕನ್ನಡ ಸಿನಿಮಾಗಳು ತುಂಬಾನೇ ಚೆನ್ನಾಗಿವೆ'' ಎಂದು ತಮ್ಮ ಕನ್ನಡದ ಅಭಿಮಾನವನ್ನು ವ್ಯಕ್ತಪಡಿಸಿದರು. ನೆರೆಭಾಷೆಯ ಚಿತ್ರಗಳನ್ನು ನೋಡದಿದ್ದರೆ ಬೇಡ, ನಿಮ್ಮ ಹಿಂದಿನ ತಲೆಮಾರಿನವರ ಚಿತ್ರಗಳನ್ನಾದರೂ ನೋಡುತ್ತೀರಲ್ಲ ಎಂದರೆ, ''ಹಳೆಯ ತಲೆಮಾರಿನ ಹಾಸ್ಯಕ್ಕೂ ಈಗಿನ ಸಿನಿಮಾಗಳ ಹಾಸ್ಯಕ್ಕೂ ಹೋಲಿಸುವುದಾದರೆ, ಬದಲಾವಣೆ ಏನೂ ಇಲ್ಲ. ನಿರ್ದೇಶಕರ ಅಭಿರುಚಿ ಹಾಗೂ ಜನರ ಬೇಡಿಕೆಗೆ ತಕ್ಕಂತೆ ಸಿನಿಮಾಗಳು ಬರುತ್ತವಷ್ಟೇ. ಎಲ್ಲ ಕಾಲಕ್ಕೂ ಇರುವುದು ಒಂದೇ ಸೂತ್ರ – ಜನರನ್ನು ನಗಿಸಬೇಕು, ಅಷ್ಟೇ'' ಎಂದು ತಮ್ಮ ಹಾಸ್ಯಸೂತ್ರ ಮಂಡಿಸಿದರು.

ಈಗ ಕಾಮಿಡಿಯಲ್ಲಿ ಕ್ಲಿಕ್ ಆಗಿದ್ದೀರಿ. ವಿಲನ್ ಪಾತ್ರದ ಆಸೆ ಈಗಲೂ ಇದೆಯೇ? ಎನ್ನುವ ಪ್ರಶ್ನೆಗೆ, ''ನಾನು ಕೇಳ್ತಾನೇ ಇದ್ದೀನಿ. ಯಾರೂ ಕೊಡಲ್ಲ. ಈಗ ಅದು ಆಗೋದು ಇಲ್ಲ ಬಿಡ್ರಿ. ನಾನೀಗ ವಿಲನ್ ಪಾತ್ರ ಮಾಡಿದ್ರೂ ಜನ ನಗ್ತಾರೆ'' ಎಂದು ಚಿಕ್ಕಣ್ಣ ಮತ್ತೊಮ್ಮೆ ನಕ್ಕರು. ಬಹುಶಃ ಅವರು ವಿಲನ್ ಗೆಟಪ್‌ನಲ್ಲಿ ತಮ್ಮನ್ನು ಕಲ್ಪಿಸಿಕೊಂಡು ನಕ್ಕಿರಬೇಕು.

ವಿಲನ್ ಪಾತ್ರ ಬಿಡಿ, ನಾಯಕನಾಗಿ ಯಾಕೆ ಅಭಿನಯಿಸಬಾರದು? ಕೋಮಲ್, ಶರಣ್‌ರಂತೆ ನೀವು ನಾಯಕನಾಗುವುದು ಯಾವಾಗ?

''ನಾಯಕನಾಗುವಂತೆ ಸಾಕಷ್ಟು ಅವಕಾಶಗಳು ಬಂದಿತ್ತು. ನೆನ್ನೆಯೂ ತೆಲುಗಿನವರೊಬ್ಬರು ಬಂದಿದ್ದರು. ಆದರೆ, ಸದ್ಯಕ್ಕೆ ಹೀರೊ ಆಗುವುದು ಬೇಡ ಅಂದುಕೊಂಡಿದ್ದೇನೆ. ಈಗ ನನಗೆ ತಲೆನೋವಿಲ್ಲ. ಆರಾಮಾಗಿರುವೆ. ಹೀರೊ ಆದರೆ ರಿಸ್ಕ್. ಗೆದ್ದರೂ ಸೋತರೂ ಹೀರೊ ತಲೆ ಮೇಲೆ ಬರುತ್ತದೆ. ಜನರನ್ನು ಎರಡೂವರೆ ಗಂಟೆ ಥಿಯೇಟರ್‌ನಲ್ಲಿ ಕೂರಿಸೋದು ತುಂಬಾನೇ ಕಷ್ಟ. ಬಂದ ಅವಕಾಶಗಳನ್ನು ಒಪ್ಪಿಕೊಂಡಿದ್ರೆ ಹೀರೊ ಆಗಿ ಒಂದ್ಹತ್ತು ಸಿನಿಮಾ ಆಗಿರ್ತಿದ್ದವು. ಈಗ ಕಾಮಿಡಿಯಲ್ಲೇ ಬಿಜಿ ಇರೋದರಿಂದ ಹೀರೊ ಆಗುವ ಬಗ್ಗೆ ಯೋಚಿಸಲು ಸಮಯವೂ ಇಲ್ಲ. ಇರೋದರಲ್ಲಿ ಖುಷಿ ಆಗಿರೋದು ನಂಗಿಷ್ಟ.''

''ಜನ ಕೂಡ ಹೀರೊ ಆಗಬೇಡಿ ಎಂದು ಹೇಳ್ತಾರೆ. ಅವರಿಗೆ ನನ್ನನ್ನು ಕಾಮಿಡಿ ನಟನನ್ನಾಗಿಯೇ ನೋಡಲು ಇಷ್ಟ. ಒಂದುವೇಳೆ ಹೀರೊ ಆಗಬೇಕು ಅನ್ನೋದು ದೇವರ ನಿರ್ಧಾರ ಆಗಿದ್ರೆ ಆಗ್ತೀನಿ. ನನಗೆ ದೇವರ ಬಗ್ಗೆ ತುಂಬಾನೇ ನಂಬಿಕೆ ಇದೆ. ಸುಮ್ಮನೆ ನಮ್ಮ ಕೆಲಸ ನಾವು ಮಾಡಿಕೊಂಡು ಹೋಗ್ತೇವೆ. ಮೇಲೆ ಹೋಗ್ತೇವೋ ಕೆಳಗೆ ಹೋಗ್ತೇವೋ ದೇವರಿಗೆ ಬಿಟ್ಟಿದ್ದು'' ಎಂದ ಅವರ ಮಾತು, 'ಹಾಲಲ್ಲಾದರೂ ಹಾಕು ನೀರಲ್ಲಾದರೂ ಹಾಕು' ಎಂದು ಎಲ್ಲ ಭಾರವನ್ನೂ ದೇವರಿಗೆ ಹೊರಿಸಿದಂತಿತ್ತು.

ನಾಯಕನ ಪಾತ್ರ ರಿಸ್ಕ್ ಎನ್ನುವುದನ್ನು ಒಪ್ಪಿಕೊಳ್ಳೋಣ, ಪೋಷಕ ಪಾತ್ರಗಳನ್ನಾದರೂ ಮಾಡಬಹುದಲ್ಲ ಎನ್ನುವುದು ನಮ್ಮ ಮುಂದಿನ ಕೆಣಕುಪ್ರಶ್ನೆ. ''ಕಾಮಿಡಿ ಜೊತೆಗೆ ಬೇರೆ ರೀತಿಯ ಪಾತ್ರಗಳನ್ನು ಮಾಡಲಿಕ್ಕೂ ತುಂಬಾ ಇಷ್ಟ. ಎಮೋಷನಲ್ ಪಾತ್ರಗಳಲ್ಲಿ ಅಭಿನಯಿಸುವುದು ನಂಗಿಷ್ಟ. 'ಚೌಕ' ಸಿನಿಮಾದಲ್ಲಿನ ನನ್ನ ಪಾತ್ರದಲ್ಲಿ ಕಾಮಿಡಿಯೇ ಇಲ್ಲ. 'ರಾಜ್‌ಕುಮಾರ' ಸಿನಿಮಾದಲ್ಲೂ ನನ್ನ ಪಾತ್ರ ಬೇರೆಯ ರೀತಿಯಲ್ಲೇ ಇದೆ. ನನಗೆ ಇಂಥ ಪಾತ್ರಗಳು ತುಂಬಾ ಇಷ್ಟ. ನಿರ್ದೇಶಕರು ಮಾಡಿಸಬೇಕಷ್ಟೇ'' ಎಂದು ಪ್ರಶ್ನೆಯನ್ನು ನಿರ್ದೇಶಕರ ಅಂಗಳಕ್ಕೆ ಒಗಾಯಿಸಿದರು.

ರಕ್ಷಣಾತ್ಮಕ ಆಟ ಪ್ರದರ್ಶಿಸುತ್ತಿದ್ದ ಚಿಕ್ಕಣ್ಣನವರ ಮೇಲೆ ಬೌನ್ಸರ್ ರೂಪದಲ್ಲಿ ಎಸೆದ ಪ್ರಶ್ನೆ, ಹೆಣ್ಣುಮಕ್ಕಳ ಕುರಿತಾದುದು. ''ಹೀರೊ ಆಗದೆ ಇರೋದಕ್ಕೆ ಬೇರೆ ಕಾರಣಗಳೇನಾದರೂ ಇವೆಯೇ? ಹೆಣ್ಣು ಮಕ್ಕಳ ಜೊತೆಗೆ ಮಾತನಾಡಲಿಕ್ಕೆ ಈಗಲೂ ತುಂಬ ಮುಜುಗರ ಪಡ್ತೀರಂತೆ? ಚಿಕ್ಕಣ್ಣಂಗೆ ನಾಚಿಕೆ ಜಾಸ್ತಿ ಅಂತಾರೆ'' ಎಂದೆವು.

''ಹಂಗೇನಿಲ್ಲ. ಪರಿಚಯದವರ ಜೊತೆ ಚೆನ್ನಾಗಿಯೆ ಇರ್ತೀನೆ. ಗೊತ್ತಿಲ್ಲದವರ ಜೊತೆ ಮಾತನಾಡೋದು ಸ್ವಲ್ಪ ಕಷ್ಟ. ರಿಯಾಲಿಟಿ ಷೋಗಳಲ್ಲಿ ಗೊತ್ತಿಲ್ಲದವರ ಜೊತೆ ಮಾತನಾಡು ಅಂದ್ರೆ ಏನು ಮಾಡೋದು... ಹುಡುಗೀರ ಜೊತೆ ಹಗ್ ಮಾಡೋದು... ಆ ಥರದ್ದು ಈ ಥರದ್ದು ಎಲ್ಲ ಮಾಡೋಕೆ ಸ್ವಲ್ಪ ಸೆಪರೇಟ್ ಟ್ಯಾಲೆಂಟ್ ಇರಬೇಕು...'' ಎಂದರು.

ತಕ್ಷಣವೇ ಉಡಾವಣೆಯಾದ, 'ಪಿಯುಸಿ ಸಮಯದಲ್ಲಿ ಆ ತರಹದ ಟ್ಯಾಲೆಂಟ್ ಬೆಳೆಸಿಕೊಳ್ಳಲಿಲ್ಲವಾ?' ಎನ್ನುವ ಉಪಪ್ರಶ್ನೆಗೆ ಚಿಕ್ಕಣ್ಣನವರು



